FEBRUARY 28, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಸಾಹಿತ್ಯದ ಓದು, ಮನುಷ್ಯನನ್ನು ಇನ್ನಷ್ಟು ಮಾನವೀಯಗೊಳಿಸುತ್ತದೆ –ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಪ್ರವಾಸೋದ್ಯಮದಿಂದ ರಾಜ್ಯಕ್ಕೆ, ಮುಂದಿನ 4 ವರ್ಷಗಳಲ್ಲಿ, 2 ಸಾವಿರದ 750 ಕೋಟಿ ರೂಪಾಯಿ ಆದಾಯ ನಿರೀಕ್ಷೆ.**
- **ದೀನ್ ದಯಾಳ್ ಜನ್ ಆಜೀವಿಕ್ ಯೋಜನೆ; ರಾಯಚೂರು, ಕಲಬುರಗಿ ಹಾಗೂ ತುಮಕೂರು, ಪಾಲಿಕೆಗಳು ಆಯ್ಕೆ.**
- **ವಿಜಯನಗರ 'ಹಂಪಿ ಉತ್ಸವ'ಕ್ಕೆ, ಇಂದು ಗಣ್ಯರಿಂದ ಚಾಲನೆ.**
- **ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ; ಸರ್ ಸಿ.ವಿ. ರಾಮನ್ ಸ್ಮರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಸಾಹಿತ್ಯದ ಓದು, ಮನುಷ್ಯನನ್ನು ಇನ್ನಷ್ಟು ಮಾನವೀಯಗೊಳಿಸುತ್ತದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ. ವಿಧಾನಸೌಧದ ಆವರಣದಲ್ಲಿ ಪ್ರಥಮ ಬಾರಿಗೆ ಆಯೋಜಿತ, ಮಾರ್ಚ್ 3ರ ವರೆಗೆ ನಡೆಯಲಿರುವ, ಪುಸ್ತಕ ಮೇಳ ಹಾಗೂ ಸಾಹಿತ್ಯಾಸಕ್ತರ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು. ಪ್ರತೀ ವರ್ಷ ವಿಧಾನಸೌಧದಲ್ಲಿ ಸಾಹಿತ್ಯ, ಪುಸ್ತಕ ಹಬ್ಬ ಆಯೋಜಿಸಲಾಗುವುದು. ಪುಸ್ತಕಗಳನ್ನು ಖರೀದಿಸಿ, ಮನೆ ಮನೆಯಲ್ಲಿ ಗ್ರಂಥಾಲಯ ಮಾಡಿಕೊಳ್ಳಿ ಎಂದು, ಜನತೆಗೆ ಕರೆ ನೀಡಿದರು.**

<><><>

**ಸಾಹಿತಿ ಚಂದ್ರಶೇಖರ ಕಂಬಾರ, ಗೋವಾದ ದಾಮೋದರ್ ಮೋಜೊ, ವಸುಧೇಂದ್ರ, ಬೊಳುವಾರು ಮಹಮ್ಮದ್ ಕುಂಞ್ಞಿ ಅವರನ್ನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಗೌರವಿಸಿದರು.**

<><><>

ಮುಂಬರುವ ವ ರ್ಷಗಳಲ್ಲಿ, ರಾಜ್ಯಕ್ಕೆ ಭೇಟಿ ನೀಡಲಿರುವ, ಪ್ರವಾಸಿಗರ ಸಂಖ್ಯೆಯಲ್ಲಿ, ಅಂದಾಜು 1 ಕೋಟಿ ದೇಶಿ ಪ್ರವಾಸಿಗರು ಮತ್ತು 1 ಲಕ್ಷ ವಿದೇಶಿ ಪ್ರವಾಸಿಗರ ಸಂಖ್ಯೆ ವೃದ್ಧಿಸುವ ಸಾಧ್ಯತೆ ಇದೆ; 2 ಸಾವಿರದ 750 ಕೋಟಿ ರೂಪಾಯಿ ಆದಾಯ, ಪ್ರವಾಸೋದ್ಯಮದಿಂದ ರಾಜ್ಯಕ್ಕೆ ಲಭಿಸುವ ನಿರೀಕ್ಷೆ ಇದೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಕರ್ನಾಟಕ ಟೂರಿಸಂ ಸೊಸಾಯಿಟಿ ಬೆಂಗಳೂರಿನಲ್ಲಿ ಆಯೋಜಿಸಿರುವ, 'ಬಿ–ಟು–ಬಿ' ಶೃಂಗ ಸಭೆಯಲ್ಲಿ ಅವರು ಮಾತನಾಡಿದರು. ಸ್ಥಳೀಯ ಕೌಶಲಯುತ ಮತ್ತು ಅರೆ ಕುಶಲ ಯುವ ಜನರಿಗೆ, ತಮ್ಮ ವಾಸಸ್ಥಳಗಳಲ್ಲಿ ಉದ್ಯೋಗಾವಕಾಶ ದೊರೆಯಲಿದೆ. ದೊಡ್ಡ ನಗರಗಳಿಗೆ ವಲಸೆ ಹೋಗುವುದು ತಪ್ಪಲಿದೆ ಎಂದರು.

<><><>

'ರಾಷ್ಟ್ರೀಯ ಜೀವನೋಪಾಯ ಅಭಿಯಾನ', ದೀನ್ ದಯಾಳ್ ಜನ್ ಆಜೀವಿಕ್ ಯೋಜನೆ ಅಡಿ, ರಾಯಚೂರು ನಗರದಲ್ಲಿ, ಹೊಸ ಉದ್ಯೋಗಗಳ ಸೃಷ್ಟಿಗೆ, ಅವಕಾಶಗಳ ಕುರಿತ ಮಾಹಿತಿ ಒದಗಿಸುವಂತೆ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ, ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದ್ದಾರೆ. 13 ರಾಜ್ಯಗಳು, 25 ನಗರಗಳನ್ನು, ಪ್ರಾಯೋಗಿಕವಾಗಿ ಯೋಜನೆ ಅನು ಷ್ಠಾನಕ್ಕೆ ಆಯ್ದು ಕೊಳ್ಳಲಾಗಿದೆ.. ರಾಜ್ಯದ ರಾಯಚೂರು, ಕಲಬುರಗಿ ಹಾಗೂ ತುಮಕೂರು ಮಹಾನಗರ ಪಾಲಿಕೆಯಲ್ಲಿ ಮಾರ್ಗಸೂಚಿಗಳಿಗೆ ಅನುಗುಣವಾಗಿ, ಕ್ರಿಯಾ ಯೋಜನೆ ಸಿದ್ಧ ಪಡಿಸಲಾಗುತ್ತಿದೆ ಎಂದರು.

<><><>

ಸರ್ವೋದಯ ಸಮುದಾಯ, ಕರ್ನಾಟಕ ಹಾಗೂ ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರ, ಇಂದು ಧಾರವಾಡದಿಂದ ಗರಗ ಗ್ರಾಮದ ವರೆಗೆ, 'ನಮ್ಮ ನಡಿಗೆ, ಸರ್ವೋದಯದ ಕಡೆಗೆ' ಪಾದಯಾತ್ರೆ ಆಯೋಜಿಸಿವೆ. ಇಂದು ಬೆಳಗ್ಗೆ, 7 ಗಂಟೆ 30 ನಿಮಿಷಕ್ಕೆ, ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರದಿಂದ ಪಾದಯಾತ್ರೆ ಆರಂಭವಾಗಲಿದೆ. ನಡಿಗೆಯ ಉದ್ದೇಶದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪ್ರತಿಷ್ಠಾನದ ಅಧ್ಯಕ್ಷ ಸಂಜೀವ ಕುಲಕರ್ಣಿ.

<><><>

ಸಂಜೀವ್ ಕುಲಕರ್ಣಿ ಧ್ವನಿ – 40 ಸೆಕೆಂದುಗಳು

<><><>

ವಿದ್ಯುತ್ ಅವಘಡ ಪ್ರಕರಣವೊಂದರಲ್ಲಿ, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪೆನಿ ನಿಯಮಿತ, ಅಂಗವಿಹೀನವಾದ 9 ವರ್ಷದ ಮಗುವಿಗೆ, 40 ಲಕ್ಷ ರೂಪಾಯಿ ಪರಿಹಾರ ನೀಡಲು ಒಪ್ಪಿ, ಪ್ರಕರಣವನ್ನು ಧಾರವಾಡ ಉಚ್ಚ ನ್ಯಾಯಾಲಯದಲ್ಲಿ, ಇತ್ಯರ್ಥ ಪಡಿಸಿಕೊಂಡಿದೆ. ನ್ಯಾಯಮೂರ್ತಿಗಳಾದ ಅಶೋಕ ಕಿಣಗಿ ಮತ್ತು ಉಮೇಶ ಅಡಿಗ ಅವರಿದ್ದ ವಿಭಾಗೀಯ ಪೀಠ, ನೀಡಿದ ಸಲಹೆ ಆಧರಿಸಿ, ನಿಗಮದ ಸದಸ್ಯ ಮಂಡಳಿ, ನಿಗದಿತ ಪರಿಹಾರ ನೀಡಿ, ರಾಜೀ ಸಂಧಾನಕ್ಕೆ ಒಪ್ಪಿಗೆ ಸೂಚಿಸಿ, ಮಾದರಿಯಾಗಿದೆ. ಮಾರ್ಚ್ 8 ರಂದು, ರಾಷ್ಟ್ರೀಯ ಲೋಕ ಅದಾಲತ್ ಏರ್ಪಡಿಸಲಾಗಿದ್ದು, ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು, ಕಾನೂನು ಸೇವಾ ಪ್ರಾಧಿಕಾರ, ಮನವಿ ಮಾಡಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ವಿಜಯನಗರ ಜಿಲ್ಲೆ ಹಂಪಿಯಲ್ಲಿ, ಇಂದಿನಿಂದ ಮಾರ್ಚ್ 2ರ ವರೆಗೆ, ಮೂರು ದಿನಗಳ, 'ಹಂಪಿ ಉತ್ಸವ', ವಿಜೃಂಭಣೆಯಿಂದ ಜರುಗಲಿದೆ.

<><><>

ತನ್ನಿಮಿತ್ತ, ಹೊಸಪೇಟೆಯಲ್ಲಿ ನಿನ್ನೆ, ವಸಂತ ವೈಭವ ಜರುಗಿತು. 125 ಜಾನಪದ ಕಲಾ ತಂಡಗಳು ಮೆರವಣಿಗೆಯ ಮೆರಗು ಹೆಚ್ಚಿಸಿದವು.

<><><>

ಇಂದು 'ಎತ್ತುಗಳ ಮೇಳ'ದಲ್ಲಿ, 200 ಜೋಡಿ ಎತ್ತುಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ 9 ಗಂಟೆಯಿಂದ, ಕಮಲಾಪುರದ ಮೈದಾನದಲ್ಲಿ, ಪ್ರದರ್ಶಿನಿ ಆಯೋಜಿತವಾಗಿದೆ.

<><><>

ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ, ಹಂಪಿ ಉತ್ಸವದ ಸ್ವಚ್ಛತಾ ಕಾರ್ಯಕ್ಕೆ ನಿಯೋಜಿತ, ಎಲ್ಲ ಪೌರ ಕಾರ್ಮಿಕರ ಕುಟುಂಬ ವರ್ಗಕ್ಕೆ, ಗಣ್ಯರ ಗ್ಯಾಲರಿಯಲ್ಲಿ ಕುಳಿತು, ಹಂಪಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು, ಪಾಸ್ ನೀಡಿ, ಆಹ್ವಾನಿಸಿದರು.

<><><>

ಇಂದು ರಾಷ್ಟ್ರೀಯ ವಿಜ್ಞಾನ ದಿನ. ಸರ್ ಸಿ.ವಿ. ರಾಮನ್ ಅವರ, 'ರಾಮನ್ ಪರಿಣಾಮ'ದ ಆವಿಷ್ಕಾರ ದಿನವಿಂದು. 'ವಿಜ್ಞಾನ ಮತ್ತು ಆವಿಷ್ಕಾರದಲ್ಲಿ, ಜಾಗತಿಕ ನಾಯಕತ್ವಕ್ಕಾಗಿ, ವಿಕಸಿತ ಭಾರತ ಧ್ಯೇಯದೊಂದಿಗೆ, ಭಾರತೀಯ ಯುವಜನತೆಯ ಸಬಲೀಕರಣ' ಧ್ಯೇಯದೊಂದಿಗೆ, ರಾಜ್ಯಾದ್ಯಂತ ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ.

<><><>

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಿನ್ನೆಲೆ, ವೈಜ್ಞಾನಿಕ ಮನೋಭಾವ ಹಾಗೂ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು, ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ, ಇಂದು ಬೆಳಗ್ಗೆ 10.30ಕ್ಕೆ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

<><><>

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಎಕ್ಸ್ ಮಾಧ್ಯಮದಲ್ಲಿ, ರಾಷ್ಟ್ರೀಯ ವಿಜ್ಞಾನ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಕಲ್ಪಿಸಲಾಗಿದೆ. "ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುತ್ತೇವೆ" ಎಂಬ, ಪ್ರತಿಜ್ಞಾ ವಿಧಿ ಸ್ವೀಕಾರ ಕಾರ್ಯಕ್ರಮ, ರಾಜ್ಯಾದ್ಯಂತ ಏಕ ಕಾಲಕ್ಕೆ, ಇಂದು ಬೆಳಗ್ಗೆ 10.30ಕ್ಕೆ ಆಯೋಜಿತವಾಗಿದೆ. ಮೌಢ್ಯ ಹಾಗೂ ಕಂದಾಚಾರ ಮುಕ್ತ ನಾಡನ್ನು ಕಟ್ಟೋಣ, ಎಂದು ಅವರು ಆಶಿಸಿದ್ದಾರೆ.

<><><>

'ಸರ್ವರಿಗೂ ವಿಜ್ಞಾನ, ಸುಲಭ ವಿಜ್ಞಾನ' ಎಂಬ ಆಶಯದೊಂದಿಗೆ, ಗ್ರಾಮೀಣ ಭಾಗದ ಮಕ್ಕಳಲ್ಲಿ, ವಿಜ್ಞಾನದ ಬಗ್ಗೆ ವಿಶೇಷ ಆಸಕ್ತಿ ಬೆಳೆಸಲು, ವಿಜ್ಞಾನ ಕೇಂದ್ರಗಳು ಹಾಗೂ ತಾರಾಲಯಗಳನ್ನು ಸ್ಥಾಪಿಸಿ, ವಸತಿ ಶಾಲೆಗಳಿಗೆ ಟೆಲಿಸ್ಕೋಪ್ ಒದಗಿಸಲಾಗುತ್ತಿದೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್. ಬೋಸರಾಜು, ಪ್ರಕಟಿಸಿದ್ದಾರೆ.

<><><>

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ, ಭಾರತೀಯ ವಿಜ್ಞಾನ ಸಂಸ್ಥೆ – ಐ.ಐ.ಎಸ್.ಸಿ. ಸಂಸ್ಥಾಪಕ, ಜೆಮ್‌ಶೆಡ್‌ಜೀ ಟಾಟಾ ಅವರ ಜನ್ಮ ದಿನದ ಹಿನ್ನೆಲೆ, ನಾಳೆ ಶನಿವಾರ, 42 ವಿಭಾಗಗಳಿಗೆ ಭೇಟಿ ನೀಡಿ, ತಿಳಿದುಕೊಳ್ಳಲು, ಸಾರ್ವಜನಿಕರಿಗೆ ಮುಕ್ತ ಅವಕಾಶ ಒದಗಿಸಿ, 'ಓಪನ್ ಡೇ' ಆಚರಿಸಲಾಗುತ್ತಿದೆ. 'ಪ್ರತ್ಯಕ್ಷ ವಿಜ್ಞಾನ ದಿನಾಚರಣೆ' ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಭಾರತೀಯ ವಿಜ್ಞಾನ ಸಂಸ್ಥೆಯ, ಸಹಾಯಕ ಕುಲಸಚಿವ ವೀರಣ್ಣ ಕಮ್ಮಾರ.

<><><>

ವೀರಣ್ಣ ಕಮ್ಮಾರ ಧ್ವನಿ 45 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಪ್ರಸಿದ್ಧ ಶ್ರೀ ಸಿದ್ಧಾರೂಢ ಮಠದಲ್ಲಿ, ವೈಭವದ ರಥೋತ್ಸವ, ಭಕ್ತಾದಿಗಳ ಹರ್ಷೋದ್ಘಾರದ ಮಧ್ಯೆ, ಸಂಜೆ ನೆರವೇರಿತು. ಅದ್ವೈತ, ಆರೂಢ ಪರಂಪರೆಯ, ಶ್ರೀ ಸಿದ್ಧಾರೂಢ ಸ್ವಾಮೀಜಿಯವರ ಮೂರ್ತಿಯನ್ನು, ಭವ್ಯವಾದ ತೇರಿನಲ್ಲಿ ಸಿಂಗರಿಸಿ, ಹೂವು-ಹಣ್ಣು ಸಮರ್ಪಿಸಿ, ವಾದ್ಯ ಮೇಳ, ಪಲ್ಲಕ್ಕಿ ಮತ್ತು ಭಜನೆಯೊಂದಿಗೆ, ಶ್ರದ್ಧಾಳುಗಳು ತೇರನ್ನೆಳೆದರು.

<><><>

ಕಾರವಾರದಲ್ಲಿ ಗರಿಷ್ಠ 38 ದಶಾಂಶ 4 ಡಿಗ್ರಿ ಸೆಲ್ಸಿಯಸ್, ಚಾಮರಾಜ ನಗರದಲ್ಲಿ ಕನಿಷ್ಠ 13 ದಶಾಂಶ 9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಮುನ್ಸೂಚನೆಯಂತೆ, ಮುಂದಿನ 7 ದಿನಗಳ ಕಾಲ, ರಾಜ್ಯಾದ್ಯಂತ ಒಣ ಹವೆ ಮುಂದುವರಿಯಲಿದೆ ಎಂದು, ರಾಜ್ಯ ಹವಾಮಾನ ಇಲಾಖೆ ತಿಳಿಸಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಇಂದು, ಚಿಕ್ಕಮಗಳೂರಿನ ಐ.ಡಿ.ಎಸ್.ಜಿ ಮಹಾವಿದ್ಯಾಲಯದಲ್ಲಿ, ಜಿಲ್ಲೆಯ ಸ್ಥಳೀಯ ಪ್ರಾಧಿಕಾರಗಳ ಕ್ಷೇತ್ರದಿಂದ, ವಿಧಾನ ಪರಿಷತ್‌ಗೆ ನಡೆದಿದ್ದ, 2021ರ ಚುನಾವಣೆಯ ಮರು ಮತ ಎಣಿಕೆ ನಡೆಯಲಿದೆ.

<><><>

ಕಲ್ಯಾಣ ಕರ್ನಾಟಕ ಭಾಗದ, ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಇಂದು ಬೆಳಗ್ಗೆ 10 ಗಂಟೆಗೆ, ಗುಲಬರ್ಗಾ ವಿಶ್ವವಿದ್ಯಾಲಯದ, ಮಹಾತ್ಮ ಗಾಂಧಿ ಸಭಾಂಗಣದಲ್ಲಿ, ಮಕ್ಕಳ ರಕ್ಷಣಾ ಘಟಕದಿಂದ, ವಿಭಾಗ ಮಟ್ಟದ, 'ಅರಿವು ಕಾರ್ಯಕ್ರಮ' ಆಯೋಜಿತವಾಗಿದೆ.

<><><>

ನಾಳೆ, ಮಾರ್ಚ್ 1 ರಿಂದ 20ರ ವರೆಗೆ, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ನಡೆಯಲಿದೆ. ರಾಜ್ಯಾದ್ಯಂತ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- ಸಾಹಿತ್ಯದ ಓದು, ಮನು ್ಯನನ್ನು ಇನ್ನಷ್ಟು ಮಾನವೀಯಗೊಳಿಸುತ್ತದೆ –ಮುಖ್ಯಮಂತ್ರಿ ಸಿದ್ದರಾಮಯ್ಯ.
- ಪ್ರವಾಸೋದ್ಯಮದಿಂದ ರಾಜ್ಯಕ್ಕೆ, ಮುಂದಿನ 4 ವರ್ಷಗಳಲ್ಲಿ, 2 ಸಾವಿರದ 750 ಕೋಟಿ ರೂಪಾಯಿ ಆದಾಯ ನಿರೀಕ್ಷೆ.
- ದೀನ್ ದಯಾಳ್ ಜನ್ ಆಜೀವಿಕ್ ಯೋಜನೆ; ರಾಯಚೂರು, ಕಲಬುರಗಿ ಹಾಗೂ ತುಮಕೂರು, ಪಾಲಿಕೆಗಳು ಆಯ್ಕೆ.
- ವಿಜಯನಗರ 'ಹಂಪಿ ಉತ್ಸವ'ಕ್ಕೆ, ಇಂದು ಗಣ್ಯರಿಂದ ಚಾಲನೆ.
- ಇಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ; ಸರ್ ಸಿ.ವಿ. ರಾಮನ್ ಸ್ಮರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>